ಕ್ರ.ಸಂ.	ಪುಸ್ತಕದ ಹೆಸರು / ಲೇಖಕರು	ಬೆಲೆ	ವೆಚ್ಚ
26.	ರಾಜಾವಳಿ ಕಥೆ : ಸಾಂಸ್ಕೃತಿಕ ಮುಖಾಮುಖಿ ಸಂ. ಡಾ. ವೆಂಕಟೇಶ ಇಂದ್ವಾಡಿ	70/–	28,225–00
27.	ಕನ್ನಡ ಕಲಿ ಲಿಂಗದೇವರು ಹಳೆಮನೆ	80/–	78,958–00
28.	ರಾಯಚೂರು ಜಿಲ್ಲೆಯ ಶಾಸನಗಳು ಡಾ. ದೇವರ ಕೊಂಡಾರೆಡ್ಡಿ	600/–	1,42,285–00
29.	ಹೈದರಾಬಾದು ಕರ್ನಾಟಕ ಹಾಡುಪಾಡು ಡಾ. ಅಮರೇಶ ನುಗಡೋಣಿ	60/–	29,797–00
30.	ಶ್ರೀ ವ್ಯಾಸರಾಯರು ಡಾ. ಕೆ. ಗೋಕುಲನಾಥ	40/–	16,210–00
31.	ಈಸಬೇಕು ಇದ್ದು ಜಯಿಸಬೇಕು ಸಂ: ಪ್ರೊ. ಎ.ವಿ. ನಾವಡ	60/–	24,340–00
32.	ವಿಜಯನಗರ ಸಾಮ್ರಾಜ್ಯದ ಪತನಾನಂತರದ ಹರಿದಾಸ ಸಾಹಿತ್ಯ ಪ್ರೊ. ವಸಂತ ಕುಷ್ಟಗಿ	10/–	6,800–00
		ಒಟ್ಟು ವೆಚ್ಚ	12,87,320–00

ರಾಜ್ಯದ ಅನುದಾನಿತ ಕಾನೂನು ಕಾಲೇಜುಗಳ ದೈಹಿಕ ಶಿಕ್ಷಕರು ಹಾಗೂ ಗ್ರಂಥಪಾಲಕರಿಗೆ ಯು.ಜಿ.ಸಿ. ವೇತನ

4523 (4809) : ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯ ಅನುದಾನಿತ ಕಾನೂನು ಕಾಲೇಜುಗಳ ದೈಹಿಕ ಶಿಕ್ಷಕರು ಹಾಗೂ ಗ್ರಂಥಪಾಲಕರಿಗೆ 1986ರ ಯುಜಿಸಿ ವೇತನವನ್ನು ನೀಡಲಾಗುತ್ತಿದೆಯೇ, ಇಲ್ಲದಿದ್ದರೆ, ಕಾರಣವೇನು.

ಆ) ಇನ್ನಿತರ ಕಾಲೇಜುಗಳ ದೈಹಿಕ ಶಿಕ್ಷಕರು ಹಾಗೂ ಗ್ರಂಥಪಾಲಕರುಗಳಿಗೆ ಯುಜಿಸಿ ವೇತನವನ್ನು ನೀಡುತ್ತಿರುವುದು ನಿಜವೇ.

ಇ) ಪದವಿ ಕಾಲೇಜುಗಳ ದೈಹಿಕ ಶಿಕ್ಷಕರ ಹಾಗೂ ಗ್ರಂಥಪಾಲಕರುಗಳ ಹಾಗೂ ಕಾನೂನು ಕಾಲೇಜುಗಳ ಗ್ರಂಥಪಾಲಕರು ಮತ್ತು ದೈಹಿಕ ಶಿಕ್ಷಕರುಗಳ ಕಾರ್ಯಭಾರ, ವಿದ್ಯಾರ್ಹತೆ ಒಂದೇ ಆಗಿದ್ದರೂ ತಾರತಮ್ಯ ಮಾಡುತ್ತಿರುವುದು ಏಕೆ.

ಈ) ಇದರಿಂದ ಕಾನೂನು ಕಾಲೇಜುಗಳ ದೈಹಿಕ, ಶಿಕ್ಷಕರಿಗೆ ಹಾಗೂ ಗ್ರಂಥಪಾಲಕರುಗಳಿಗೆ ವೇತನದಲ್ಲಿ ತುಂಬಾ ಅನ್ಯಾಯವಾಗಿರುವುದು ನಿಜವಲ್ಲವೆ;

ಉ) ಹಾಗಿದ್ದರೆ, ಇವರುಗಳಿಗೆ ಯಾವ ದಿನಾಂಕದಿಂದ ಯುಜಿಸಿ ವೇತನವನ್ನು ನೀಡಲಾಗುವುದು?

ಡಾ. ಜಿ. ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು)

ಅ) ಇಲ್ಲ. ಇವರುಗಳಿಗೆ ಯುಜಿಸಿ ವೇತನ ನೀಡುವ ವಿಷಯ ಸರ್ಕಾರದ ನೀತಿ ವಿಷಯವಾಗಿದ್ದು, ಪರಿಶೀಲನೆಯಲ್ಲಿದೆ.

ಆ) ಹೌದು.

ಇ) ಸರ್ಕಾರದ ಪರಿಶೀಲನೆಯಲ್ಲಿದೆ.

ಈ) ಉ) ಪರಿಶೀಲನೆಯ ನಂತರ ಕಂಡುಕೊಳ್ಳಬಹುದಾಗಿದೆ.

ರಾಜ್ಯದಲ್ಲಿ ಜನತಾ ಮನೆಗಳನ್ನು ಕಟ್ಟಿಸಲು ಸರ್ಕಾರವು ಹಾಕಿಕೊಂಡಿರುವ ಗುರಿ ಕುರಿತು

4525 (4811) : ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಲ್ಲಿ ಕಟ್ಟಿರುವ ವಿವಿಧ ಜನತಾ ಮನೆಗಳು ಎಷ್ಟು: (ವರ್ಷವಾರು ವಿವರ ನೀಡುವುದು)

ಆ) ಈ ಜನತಾ ಮನೆಗಳನ್ನು ಕಟ್ಟಿಸಲು ಸರ್ಕಾರ ಹಾಕಿಕೊಂಡ ಆರ್ಥಿಕ ಹಾಗೂ ಭೌತಿಕ ಗುರಿಯೇನು:

ಇ) ಈ ಗುರಿಯಲ್ಲಿ ವೆಚ್ಚ ಮಾಡಿದ ಹಣವೆಷ್ಟು: ಭೌತಿಕ ಸಾಧನೆ ಏನು:

ಈ) 31.3.2003 ಕ್ಕೆ ಬಾಕಿ ಇರುವ ಆರ್ಥಿಕ ಹಾಗೂ ಭೌತಿಕ ಹಣ ಹಾಗೂ ಮನೆಗಳೆಷ್ಟು:

ಶ್ರೀ ಸಿ.ಆರ್. ಸಗೀರ್ ಅಹ್ಮದ್ (ವಸತಿ ಸಚಿವರು)

ಅ) ಕಳೆದ ಮೂರು ವರ್ಷಗಳಲ್ಲಿ ಯಾವುದೇ ಜನತಾ ಮನೆಗಳನ್ನು ನಿರ್ಮಿಸಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಜಿಲ್ಲಾ ಗ್ರಂಥಾಲಯಾಧಿಕಾರಿಗಳಿಗೆ ಕೆ.ಸಿ.ಎಸ್.ಆರ್. ನಿಯಮ 68ರ ಅನ್ವಯ

4527 (5147) : ಶ್ರೀ ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) : ಮಾನ್ಯ ವಯಸ್ಕರ ಶಿಕ್ಷಣ, ಗ್ರಂಥಾಲಯಗಳು, ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಜಿಲ್ಲಾ ಮುಖ್ಯ ಗ್ರಂಥಾಲಯಾಧಿಕಾರಿಗಳಾಗಿ ಕೆಸಿಎಸ್ಆರ್ ನಿಯಮ 68ರ ಅಡಿಯಲ್ಲಿ ಸೇವೆ ಸಲ್ಲಿಸಲು ಅವಧಿ ಇರುವುದು ಎಷ್ಟು ವರ್ಷ.

ಆ) ಪ್ರಸ್ತುತ ಕಾರವಾರ ಹಾಗೂ ಮಡಿಕೇರಿಯಲ್ಲಿ ನಿಯಮ 68ರ ಅಡಿಯಲ್ಲಿ ಸೇವೆ ಸಲ್ಲಿಸುತ್ತಿರುವ ಅಧಿಕಾರಿಗಳು ಎಷ್ಟು ವರ್ಷದಿಂದ ಇರುವುದು.

ಇ) ಕೆಸಿಎಸ್ಆರ್ ನಿಯಮ ಉಲ್ಲಂಘಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಈ) ಬಂದಿದ್ದರೆ ಸರ್ಕಾರ ಈ ಕುರಿತು ತೆಗೆದುಕೊಂಡ ಕ್ರಮಗಳೇನು?